## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 35

ಮಾನ್ಯ ಸದಸ್ಯರ ಹೆಸರು : ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 07.12.2020

ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯಕ್ಕೆ ಕೋವಿಡ್ ಲಸಿಕೆ ದೊರೆಯುವುದು ಖಚಿತವಾಗಿದೆಯೇ? | ಹೌದು |
| ಆ) | ಕೋವಿಡ್ ಲಸಿಕೆ ವಿತರಣೆಗೆ ಸರ್ಕಾರವು ಯಾವ ಯಾವ ಸಿದ್ಧತೆಗಳನ್ನು ಮಾಡಿಕೊಂಡಿದೆ. | • ಕೊರೋನಾ-19 ಸಾಂಕ್ರಾಮಿಕವನ್ನು ಗುಣಪಡಿಸುವ ಲಸಿಕೆಯನ್ನು ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಮೊದಲ ಆದ್ಯತೆಯಾಗಿ ಸರ್ಕಾರಿ ಮತ್ತು ಖಾಸಗಿ ವಲಯದ ಆರೋಗ್ಯ ಕಾರ್ಯಕರ್ತರಿಗೆ ವಿತರಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.<br>• ಸದರಿ ಪ್ರಕ್ರಿಯೆಯಾಗಿ ಸರ್ಕಾರಿ ವಲಯದ 224083 ಮತ್ತು ಖಾಸಗಿ ವಲಯದ 245773 ಆರೋಗ್ಯ ಕಾರ್ಯಕರ್ತರನ್ನು ನೋಂದಾಯಿಸಲಾಗಿದೆ ಮತ್ತು ಕೋವಿನ್ ತಂತ್ರಾಂಶದಲ್ಲಿ ಇಂದೀಕರಿಸುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.<br>• ಕೋವಿಡ್ ಲಸಿಕೆ ನೀಡಲು ಸಂಭಾವ್ಯ ಲಸಿಕೆ ನೀಡುವವರನ್ನು ಸರ್ಕಾರಿ ವಲಯ (68317) ಮತ್ತು ಖಾಸಗಿ ವಲಯ (35310)ಗಳು ಸೇರಿದಂತೆ ಗುರುತಿಸಲಾಗಿದೆ. ಭಾರತ ಸರ್ಕಾರದಿಂದಲೇ ಲಸಿಕೆಗಳು ಪೂರೈಕೆಯಾಗಲಿದ್ದು, ಲಸಿಕೆಗಳ ಹಾಗೂ ಸಿರಿಂಜ್‌ಗಳ ಶೇಖರಣೆ, ವಿತರಣೆ ಮತ್ತು ನಿರ್ವಹಣೆಗಾಗಿ ಸಜ್ಜುಗೊಳಿಸಲಾಗುತ್ತಿದೆ.<br>• ರಾಜ್ಯಮಟ್ಟದ ಚಾಲನಾ ಸಮಿತಿ ಸಭೆ, ರಾಜ್ಯ ಮಟ್ಟದ ಕಾರ್ಯಪಡೆ ಸಭೆಗಳು, ಜಿಲ್ಲಾ ಮಟ್ಟದ ಕಾರ್ಯಪಡೆ ಸಭೆಗಳು ಮತ್ತು ತಾಲ್ಲೂಕು ಕಾರ್ಯಪಡೆ ಸಭೆಗಳು ನಡೆದಿವೆ.<br>• ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ಲಭ್ಯವಿರುವ ಶೀತಲ ಸರಪಣಿ ಉಪಕರಣಗಳಲ್ಲದೆ ಕೋವಿಡ್ ಲಸಿಕೆ ಶೇಖರಣೆಗಾಗಿ 395 ಡೀಫ್ ಫ್ರೀಜರ್, 15 ಲಸಿಕಾ ವಾಹನ, 2 ರೆಫ್ರಿಜರೇಟಡ್ ಲಸಿಕಾ ವಾಹನ, 3 ವಾಕ್ ಇನ್ ಫ್ರೀಜರ್ ಒದಗಿಸಲು ಹಾಗೂ ಬೆಂಗಳೂರು ನಗರ, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ವಿಭಾಗೀಯ ಮಟ್ಟದ |

| | | |
|---|---|---|
| | | ಲಸಿಕಾ ಉಗ್ರಾಣ ಮಾಡಲು ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.<br>• ಶೀತಲ ಸರಪಣಿ ಸಾಮರ್ಥ್ಯ ಅಭಿವೃದ್ಧಿಗಾಗಿ ಇತರೆ ಇಲಾಖೆಗಳಲ್ಲಿ ಎಲ್ಲಾ ಹಂತಗಳಲ್ಲಿ ಲಭ್ಯವಾಗಬಹುದಾದ ಶೀತಲ ಮತ್ತು ಒಣ ಶೇಖರಣಾ ಸಾಮರ್ಥ್ಯದ ಮಾಹಿತಿಯನ್ನು ಪಡೆಯಲಾಗುತ್ತಿದೆ. |
| ಇ) | ಕೋವಿಡ್ ಲಸಿಕೆಯನ್ನು ಎಲ್ಲಾ ಜಿಲ್ಲೆಗಳಿಗೂ ವಿತರಣೆ ಮಾಡಲಾಗುತ್ತದೆಯೇ? | ಹೌದು |

**ಸಂಖ್ಯೆ: ಆಕುಕ 35 ಎಸ್.ಟಿ.ಕ್ಯೂ 2020**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು